# ಉಳಿಯುವ ಪ್ರಶ್ನೆಗಳು

ಪ್ರತಿ ವರ್ಷದಂತೆ ಅಂತರರಾಷ್ಟ್ರೀಯ ಮಹಿಳಾ ದಿನ ಬಂದಿದೆ. ಯಥಾಪ್ರಕಾರ ಸಭೆ–ಸಮಾರಂಭ, ಘೋಷಣೆ, ಆಕರ್ಷಕ ಜಾಹೀರಾತು, ರಿಯಾಯಿತಿ ದರದಲ್ಲಿ ವಸ್ತುಗಳನ್ನು ಒದಗಿಸುವ ಮಾರುಕಟ್ಟೆ ವಹಿವಾಟು ಇಷ್ಟರಲ್ಲೇ ಮುಗಿದು ಹೋಗುತ್ತದೆ. ಅಸಲಿಗೆ ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ತಿಂಗಳಾನುಗಟ್ಟಲೆ ಸಮರಧೀರ ಹೋರಾಟ ನಡೆಸಿ ಕೆಲವು ಸೌಲಭ್ಯಗಳನ್ನು ಪಡೆದು ಜಯಶಾಲಿಯಾದ ದಿನದ ಸ್ಮರಣೆಗಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಆಚರಿಸಿಕೊಂಡು ಬರಬೇಕೆಂಬ ಇರಾದೆ ಇತ್ತು. ಮಹಿಳೆಯರಾದಿಯಾಗಿ ಪ್ರತಿಯೊಬ್ಬರು ಸ್ತ್ರೀಯರ ಬದುಕಿನ ಸಮಗ್ರ ಆಯಾಮಗಳ ಕುರಿತು ಚಿಂತನೆ ನಡೆಸಬೇಕಾದ ದಿನವದು. ಮಹಿಳೆಯರ ಸ್ಥಿತಿಗತಿಯಲ್ಲಿ ಸಮಗ್ರ ಬದಲಾವಣೆಗಳು ಆಗಿವೆಯೇ? ಮಹಿಳೆಯರು ಶೋಷಣೆಯಿಂದ ಮುಕ್ತರಾಗಿದ್ದಾರೆಯೆ? ಇಲ್ಲವಾದರೆ ಏಕೆ? ವರ್ತಮಾನದಲ್ಲಿ ಜಗತ್ತಿನಾದ್ಯಂತ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಕ್ರೌರ್ಯ, ಲೈಂಗಿಕ ದೌರ್ಜನ್ಯಗಳ ವಿಕಾರ, ವಿಕೃತಿ ಇವುಗಳನ್ನು ಕುರಿತು ಗಂಭೀರವಾದ ಚರ್ಚೆ ನಡೆಸಬೇಕಾದ ಅವಶ್ಯಕತೆ ಇದೆ. ಎಪಿಸ್ಟನ್ ಫೈಲ್‌ನಂಥ ಕರಾಳ ಕಾಂಡವೊಂದು ಹೊರ ಬಿದ್ದ ಹೊತ್ತಿನಲ್ಲಿಯಂತೂ ಜಗತ್ತಿನಾದ್ಯಂತ ಮಹಿಳೆಯರು ಮರೆವಿನಿಂದ ಹೊರಬರಬೇಕಿದೆ.

ಮಹಿಳಾ ದಿನವನ್ನು ಕುರಿತು ಉಡಾಫೆಯಾಗಿ ಮಾತಾಡುವವರಿಗಂತೂ ಕೊರತೆ ಇಲ್ಲ. ಇತ್ತೀಚೆಗಂತೂ ಹೆಚ್ಚುತ್ತಿರುವ ವಿವಾಹ ವಿಚ್ಛೇದನಗಳನ್ನು ಉದಾಹರಿಸುತ್ತ ಹುಡುಗಿಯರು ತುಂಬಾ ಜೋರಾಗಿದ್ದು ಹುಡುಗರ ಮೇಲೆಯೆ ಶೋಷಣೆ ನಡೆಸುತ್ತಿದ್ದಾರೆ ಎಂಬ ನಿರೂಪಣೆ ಕೇಳುತ್ತಿದ್ದೇವೆ. ಆಧುನಿಕೋತ್ತರ ಬೃಹತ್ ಬಂಡವಾಳದಿಂದಾಗಿ ಬದಲಾದ ಉತ್ಪಾದನಾ ವ್ಯವಸ್ಥೆಯು ನಮ್ಮ ಪರಂಪರಾಗತ ಸಮಾಜ ವ್ಯವಸ್ಥೆಯ ರಚನೆಗಳಾದ ಮದುವೆ, ಕುಟುಂಬದಂಥ ಘಟಕಗಳ ಸ್ವರೂಪ ಮತ್ತು ಅವುಗಳ ಕಾರ್ಯಕ್ಷಮತೆಯಲ್ಲಿ ಬದಲಾವಣೆಗಳನ್ನುಂಟು ಮಾಡುತ್ತವೆ.

ಕೃಷಿ ಪ್ರಧಾನವಾಗಿದ್ದ ವ್ಯವಸ್ಥೆಯಲ್ಲಿ ಅವಿಭಕ್ತ ಕುಟುಂಬಗಳು ಅಪೇಕ್ಷಣೀಯ ಮತ್ತು ಸಹಜವಾಗಿದ್ದವು. ಆಧುನಿಕ ವ್ಯವಸ್ಥೆಗೆ ತೆರೆದುಕೊಂಡಂತೆ ಬೃಹತ್ ಉದ್ದಿಮೆಗಳು ಜೀವನೋಪಾಯದ ಪರ್ಯಾಯ ಮಾರ್ಗಗಳಾದಾಗ ನಗರೀಕರಣ ತಾನೇ ತಾನಾಗಿ ವಿಜೃಂಭಿಸಿತು. ಜಗತ್ತಿನ ಸಂಪತ್ತು ಜಾಗತಿಕ ಮಟ್ಟದ ಕೆಲವರ ಕೈಯಲ್ಲಿ ಸಂಚಯಗೊಂಡಿರುವ ಹಂತದಲ್ಲಿ ಅವರ ಧನದಾಹದಿಂದ ಕ್ಷಣಕ್ಷಣಕ್ಕೂ ಉತ್ಪಾದನಾ ವ್ಯವಸ್ಥೆಯಲ್ಲಿ ಬದಲಾವಣೆಗಳು ಸಂಭವಿಸುತ್ತಿವೆ. ತಂತ್ರಜ್ಞಾನದಲ್ಲಿ ನಡೆಯುತ್ತಿರುವ ಆವಿಷ್ಕಾರಗಳು ನಮ್ಮ ದೈನಂದಿನ ಬದುಕನ್ನು ಹಿಂಡಿ ಹಿಪ್ಪೆ ಮಾಡುತ್ತಿವೆ. ಸಾಫ್ಟ್‌ವೇರ್‌ದಿಂದ ಈಗಂತೂ ಎಐ ಕೃತಕ ಬುದ್ಧಿಮತ್ತೆ ತಾಂತ್ರಿಕತೆಗೆ ಕಾಲಿಟ್ಟಿದ್ದೇವಷ್ಟೇ.

ಬೃಹತ್ ಬಂಡವಾಳ ಲೋಕಕ್ಕೆ ಮನುಷ್ಯರು ಜೀವಿಗಳಂತೆ ಕಾಣಿಸುವುದಿಲ್ಲ. ಅವರೇನಿದ್ದರೂ ದುಡಿಯುವ ಯಂತ್ರಗಳು. ಅವರ ಲಾಭದಾಯಕ ಉದ್ದಿಮೆಗೆ ಹೂಡಿದ ಸಂಪನ್ಮೂಲ ಮಾತ್ರ. ಹೀಗಾಗಿ ದುಡಿಸಿಕೊಳ್ಳುವವರಿಗೆ ಹಗಲು ರಾತ್ರಿಗಳೆಂಬ ಪರಿಧಿಯಿಲ್ಲ. ದೇಶವೆಂಬ ಗಡಿಯಿಲ್ಲ. ಹೆಣ್ಣು–ಗಂಡೆಂಬ ವಿವಕ್ಷೆಯಿಲ್ಲ. ಇದೇ ಜಾಗತಿಕರಣ. ದುಡಿಯುವವರ ನೋವು–ನಲಿವು, ಅನುವು–ಆಪತ್ತು ಇವು ಯಾವುವುಗಳ ಹಂಗಿಲ್ಲ. ನಮ್ಮ ದೇಶದ ಬಂಡವಾಳಿಗರು ಕೂಡ ದೇಶವು ನಾಗಾಲೋಟದಲ್ಲಿ ಅಭಿವೃದ್ಧಿ ಸಾಧಿಸಬೇಕಾದರೆ ನಾವು ದಿನದ 18 ತಾಸುಗಳು ದುಡಿಯಬೇಕು ಎಂಬ ಫರಮಾನು ಹೊರಡಿಸುತ್ತಾರೆ. ಅಸಲಿಗೆ ಅದು ಯಾರ ಅಭಿವೃದ್ಧಿಗೆ ನಾಂದಿಯಾಗುತ್ತದೆ ಎಂಬುದು ಬೇರೆ ಮಾತು. ಹಗಲು ರಾತ್ರಿಗಳ ಹಂಗಿಲ್ಲದೆ ದುಡಿಯುತ್ತಿರುವ ಐಟಿ, ಡಿಜಿಟಲ್ ಲೋಕದ ಮಕ್ಕಳಿಗೆ ಪರಂಪರಾಗತ ವಿವಾಹ, ಕುಟುಂಬಗಳನ್ನು ನಿರ್ವಹಿಸುವ ಅವಕಾಶವಾಗಲಿ ವ್ಯವಧಾನವಾಗಲಿ ಇಲ್ಲ.

ಜೀವನ ವಿಧಾನದಲ್ಲಿ ಊಹಾತೀತ ಪಲ್ಲಟಗಳಾಗಿವೆ. ಆದರೆ ನಮ್ಮ ಸಾಮಾಜಿಕ ಮೌಲ್ಯಗಳು ಮಾತ್ರ ತಾವು ಬದಲಾಗಲಾರೆವು ಎಂಬ ಜಿದ್ದು ಹಿಡಿದು ಕುಳಿತಿವೆ. ಡಿಜಿಟಲ್ ಕ್ಷೇತ್ರದಲ್ಲಿ ದುಡಿಯುತ್ತಿರುವ ಯುವಪೀಳಿಗೆಯ ಮನೋಸ್ಥಿತಿಯನ್ನು ಹೊಸ ಆರ್ಥಿಕ ನೀತಿಗಳು ನಿಯಂತ್ರಿಸುತ್ತಿವೆ. ಯುವಪೀಳಿಗೆಯೂ ತಮ್ಮ ಬದುಕು ಕಟ್ಟಿಕೊಳ್ಳಲು ಹೆಣಗುತ್ತಿವೆ. ದೊರೆತ ಉದ್ಯೋಗಗಳಲ್ಲಿ ಭದ್ರತೆಯಿಲ್ಲ. ಟಾರ್ಗೆಟ್, ಎಕ್ಸಲೆನ್ಸಿ, ಕಾಂಪಿಟೇಷನ್ ಇತ್ಯಾದಿ ವಿದ್ಯಮಾನಗಳು ಅವರ ಶ್ರಮ ಮತ್ತು ಪ್ರತಿಭೆಯನ್ನು ಹಿಂಡಿ ಹಿಪ್ಪೆ ಮಾಡುತ್ತಿವೆ. ಗಂಡು ಹೆಣ್ಣುಗಳಿಬ್ಬರಿಗೂ ತಮ್ಮದೆ ಸಂಸಾರ ಕಟ್ಟಿಕೊಳ್ಳಲು ಬೇಕಾದ ಸಮಯ, ವ್ಯವಧಾನ ವಾಸ್ತವದಲ್ಲಿ ಧೈರ್ಯ ಇಲ್ಲವಾಗಿದೆ. ನೌಕರಿ ಉಳಿಸಿಕೊಳ್ಳಲು ಹೆಣಗಾಡುತ್ತಿರುವ ಅವರಿಗೆ ಸಂಸಾರ ಉಳಿಸಿಕೊಳ್ಳಲು ಬೇಕಾದ ಸ್ಕಿಲ್ ಅಥವಾ ತಾಕತ್ತು ಅಂದರೆ ಪರಸ್ಪರರನ್ನು ಅರ್ಥ ಮಾಡಿಕೊಳ್ಳಲು ಬೇಕಾದ ನಮ್ರತೆ ಕಳೆದು ಹೋಗಿದೆ. ಮೊದಲಿನಂತೆ ಈಗ ಸ್ತ್ರೀಯರು ಆರ್ಥಿಕವಾಗಿ ಪುರುಷರ ಮೇಲೆ ಅವಲಂಬಿತರಾಗಿಲ್ಲವಷ್ಟೆ. ಮಡಿವಂತರ ಪ್ರಕಾರ ಹೆಣ್ಣುಮಕ್ಕಳು ಆರ್ಥಿಕವಾಗಿ ಸ್ವಾವಲಂಬಿಗಳಾಗಿರುವುದೆ ಎಲ್ಲ ಅನಿಷ್ಟಕ್ಕೂ ಕಾರಣ ಎಂಬ ಹಳಸಲು ವಾದ ಇನ್ನೂ ಜೀವಂತವಾಗಿದೆ. ಇನ್ನೂ ಕುಟುಂಬ ಕಟ್ಟಿಕೊಳ್ಳಲು ಬೇಕಾಗಿರುವುದು ಮಾನಸಿಕ ಆಲಂಬನೆ. ಅಂದರೆ ಭಾವನಾತ್ಮಕ ಸಂಬಂಧ. ಅದನ್ನೂ ಅವರ ಉದ್ಯೋಗಸ್ಥ ವಲಯ ತಿಂದು ಹಾಕಿದೆ. ಈಗ ಉಳಿದಿರುವುದು ಕೇವಲ ಸಾಮಾಜಿಕ ಸಂಬಂಧ. ಸಾಮಾಜಿಕ ಕಟ್ಟು ಕಟ್ಟಳೆಗಳು ಅದೆಷ್ಟು ಅಳ್ಳಕವೂ ಅಮೂರ್ತವೂ ಆಗಿರುತ್ತವೆ ಎಂದರೆ ಅನೂಚಾನವಾಗಿ ಮನುಷ್ಯರು ಸಾಮಾಜಿಕ ನಿರ್ಬಂಧಗಳನ್ನು ಧಿಕ್ಕರಿಸುತ್ತಲೆ ಬಂದಿದ್ದಾರೆ. ಮೌಲ್ಯದ ಹೆಸರಿನಲ್ಲಿರುವ ಅನೇಕ ಅವೈಜ್ಞಾನಿಕ, ಅನೈಸರ್ಗಿಕ ನಿಯಮಗಳ ಉಲ್ಲಂಘನೆಯಾಗುತ್ತಲೆ ಇರುತ್ತದೆ. ಅಂಥ ಸಂದರ್ಭದಲ್ಲಿ ಸಮಾಜ ತನ್ನದೆ ನಾಗರೀಕರನ್ನು ಅಮಾನವೀಯವಾಗಿ ದಂಡನೆಗೆ ಗುರಿಪಡಿಸಿದೆ.

ಈ ವ್ಯವಸ್ಥೆಯೆ ಸಿಂಗಲ್ ಮದರ್, ಅಥವಾ ಲಿವ್ ಟುಗೆದರ್ ಜೀವನಕ್ಕೆ ನೂಕಿದೆ. ಇದರಲ್ಲಿ ಮಹಿಳೆ ಪುರುಷರಿಬ್ಬರೂ ಸಮಭಾಗಿಗಳಾಗಿದ್ದಾರೆ. ಆದರೆ ಅದರ ಜವಾಬ್ದಾರಿ ಮಾತ್ರ ಸಂಪೂರ್ಣ ಮಹಿಳೆಯರ ಮೇಲೆ ಹೇರಿಸಲಾಗುತ್ತಿದೆ. ವಿಚ್ಛೇದನಗಳು ಹೆಚ್ಚಾಗಲು ಕಾರಣ ಇಂದಿನ ಯುವತಿಯರಲ್ಲ. ಸ್ತ್ರೀಯರು ಸ್ವೇಚ್ಛಾಚಾರಿಗಳು ಎಂಬ ಮಾತಂತೂ ಶುದ್ಧ ತರಲೆ. ಆಧುನಿಕೋತ್ತರ ಕಾಲಘಟ್ಟ ಉಂಟು ಮಾಡಿರುವ ಎಲ್ಲ ಅನಿಷ್ಟಗಳಿಗೂ ಮಹಿಳೆಯರೆ ಕಾರಣ ಎಂಬ ಅದೇ ಹಳಸಲು ವಾದವು ಮತ್ತೆ ಮತ್ತೆ ಮುನ್ನೆಲೆಗೆ ಬರುತ್ತಿರುವ ಹೊತ್ತಲ್ಲಿ ಮಹಿಳಾ ದಿನಾಚರಣೆ ಆಚರಿಸಿಕೊಳ್ಳಬೇಕಾದ ಬಗೆ ಹೇಗೆ? ಎಂಬ ಪ್ರಶ್ನೆಯೊಂದು ಕಾಡದೆ ಇರದು.

■ **ಮೀನಾಕ್ಷಿ ಬಾಳಿ**

## ಮಾತೇ ಮುತ್ತು

- ಕಣ್ಣಿಗೆ ಕಣ್ಣು ತತ್ವವು ಇಡೀ ಜಗತ್ತನ್ನು ಕುರುಡಾಗಿಸುವುದು.

  —ಕುವೆಂಪು
- ಪಾಂಡಿತ್ಯಕ್ಕಿಂತ ಅನುಭವಕ್ಕೆ ಹೆಚ್ಚು ಬೆಲೆ.

  —ಕ್ಯಾಡ್ಮನ್
- ಒಂದು ದೇಶ ರೂಪುಗೊಳ್ಳುವುದು ಅಲ್ಲಿನ ಶಿಕ್ಷಣ ವ್ಯವಸ್ಥೆ ಹೇಗಿದೆ ಎನ್ನುವುದರ ಮೇಲೆ.

  —ರಾಧಾಕೃಷ್ಣನ್
- ಮನಸ್ಸು ಎಲ್ಲಕ್ಕೂ ಮೂಲ. ಅದನ್ನು ಸರಿಪಡಿಸಿಕೊಳ್ಳದ ಹೊರತು ಇನ್ನಾವುದೂ ಸರಿಯಾಗದು.

  —ಡಿ.ವಿ.ಜಿ
- ಹೆಂಡತಿ ಒಂದು ಕನ್ನಡಿ ಇದ್ದಂತೆ, ಅದರಲ್ಲಿ ಕಾಣುವ ಪ್ರತಿಬಿಂಬವೇ ಪತಿ.

  —ತ್ರಿವೇಣಿ
- ಅಳುವಾಗ ಒಂಟಿಯಾಗಿ ಅಳು, ನಗುವಾಗ ಎಲ್ಲರೊಡನೆ ನಗು.

  —ಥಾಮಸ್ ಫುಲ್ಲರ್
- ಹೆಚ್ಚಿನ ಕನಸುಗಳು ಮೊದಲು ಅಸಾಧ್ಯ ಎಂದೇ ತೋರುತ್ತವೆ. ಆದರೆ ಅವುಗಳನ್ನು ನನಸು ಮಾಡಲು ಮನಸ್ಸು ಕೊಟ್ಟಾಗ ಅವು ನಮಗೆ ಅನಿವಾರ್ಯವಾಗಿ ಬಿಡುತ್ತವೆ.

  —ಕ್ರಿಸ್ಟೋಫರ್ ರೀವ್